7	ದೇವನಹಳ್ಳಿ ತಾ	ಶ್ರೀ ವಿ ಕುಮಾರಸ್ವಾಮಿ
8	ಹೊಸಕೋಟೆ ತಾ	ಶ್ರೀ ಡಿ ಪುಟ್ಟಸ್ವಾಮಿ

ಆ ಅಬಕಾರಿ ಕಾಯ್ದೆ 1965ರ ಕಲಂ 17(2)ರ ಅಡಿಯಲ್ಲಿ ಜಿಲ್ಲಾಧಿಕಾರಿಗಳು ಗುತ್ತಿಗೆದಾರರ ಅರ್ಜಿಯ ಆಧಾರದ ಮೇಲೆ ಅನುಮೋದಿಸುವ ಉಪ ಗುತ್ತಿಗೆದಾರರಿಗೆ ಸನ್ನದು ನೀಡಲು ಅವಕಾಶವಿದೆ

ಇ ಇಲ್ಲ

ಉದ್ಭವಿಸುವುದಿಲ್ಲ

ಅಬಕಾರಿ ಗುತ್ತಿಗೆದಾರರು ನೀಡಿದ ಬ್ಯಾಂಕ್ ಗ್ಯಾರಂಟಿ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 137(401)

ಸದಸ್ಯರ ಹೆಸರು ಶ್ರೀ ಜಯಪ್ರಕಾಶ್ ಹೆಗಡೆ ಕೆ (ಬ್ರಹ್ಮಾವರ)

ಉತ್ತರಿಸುವ ಸಚಿವರು ಶ್ರೀ ಎಂ ಎಸ್ ಸಾಣಿಯ್ಯ (ಅಬಕಾರಿ ರಾಜ್ಯ ಸಚಿವರು)

ಪ್ರಶ್ನೆ

ಅ) ರಾಜ್ಯದಲ್ಲಿರುವ 175 ತಾಲ್ಲೂಕುಗಳ ಪೈಕಿ ಅಬಕಾರಿ ಗುತ್ತಿಗೆದಾರರು ಎಷ್ಟು ತಾಲ್ಲೂಕುಗಳಲ್ಲಿ ಗುತ್ತಿಗೆಗಾಗಿ ಬ್ಯಾಂಕ್ ಗ್ಯಾರಂಟಿ ನೀಡಿರುತ್ತಾರೆ

ಎಷ್ಟು ತಾಲ್ಲೂಕುಗಳಲ್ಲಿ ಬ್ಯಾಂಕ್ ಗ್ಯಾರಂಟಿಯನ್ನು ನೀಡಲಾಗಿಲ್ಲ

ಆ) ಹೀಗೆ ಆಕ್ಷನ್‌ನಲ್ಲಿ ಅಬಕಾರಿ ಗುತ್ತಿಗೆಯನ್ನು ಪಡೆದಿದ್ದು ಬ್ಯಾಂಕ್ ಗ್ಯಾರಂಟಿ ನೀಡದೇ ಇರಲು ಕಾರಣಗಳೇನು, ಅಂತಹ ಗುತ್ತಿಗೆದಾರರ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಉತ್ತರ

ಅ) 150 ತಾಲ್ಲೂಕುಗಳಲ್ಲಿ ಬ್ಯಾಂಕ್ ಗ್ಯಾರಂಟಿಗಳನ್ನು ನೀಡಿರುತ್ತಾರೆ

25 ತಾಲ್ಲೂಕುಗಳಲ್ಲಿ ಬ್ಯಾಂಕ್ ಗ್ಯಾರಂಟಿ ನೀಡಿರುವುದಿಲ್ಲ

ಆ) ನಿಗದಿತ ಅವಧಿಯಲ್ಲಿ ಬ್ಯಾಂಕ್ ಭದ್ರತೆಗಳನ್ನು ಕೆಳಕಂಡ ಕಾರಣಗಳಿಗಾಗಿ ನೀಡಿರುವುದಿಲ್ಲ

ಅ) ಕೆಲವು ಪ್ರದೇಶಗಳಲ್ಲಿ ಸಂಭವಿಸಿದ ನೀರಾ ಚಳುವಳಿ ಹಾಗೂ ಅಬಕಾರಿ ವರ್ಷದ ಮೊದಲ ಭಾಗದಲ್ಲಿ ಇದ್ದ ಬರ ಪರಿಸ್ಥಿತಿಯ ಕಾರಣ ಸಾರಾಯಿ ಮಾರಾಟದಲ್ಲಿ ಆಗಿರುವ ಇಳಿಕೆ

ಆ) ಅಕ್ಟೋಬರ್‌ನಿಂದ ಡಿಸೆಂಬರ್ 2001ರವರೆಗೆ ರಾಜ್ಯದ 29 ತಾಲ್ಲೂಕುಗಳಲ್ಲಿ ಸಾರಾಯಿ ತಂಗಡಿಗಳ ಮರು ಹರಾಜು ನಡೆದಿದೆ ಸುಸ್ತಿದಾರರಾದ ಗುತ್ತಿಗೆದಾರರು ಸರ್ಕಾರದಲ್ಲಿ ರೇವಣಿ ಇಟ್ಟಿದ್ದ ಒಂದು ತಿಂಗಳಿಗೆ ಸಮನಾದ ಬಾಡಿಗೆ ಮೊತ್ತವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗಿದೆ ಇಂತಹ ಗುತ್ತಿಗೆದಾರರು ಗುತ್ತಿಗೆ ನೋಂದಣಿ ಮಾಡಿಕೊಂಡ ಸಂದರ್ಭದಲ್ಲಿ ನೀಡಿದ ಬ್ಯಾಂಕ್ ಭದ್ರತೆ ಹಾಗೂ ಹರಾಜಿನ ನಂತರ ನೀಡಿದ ಭಾಗಶಃ ಬ್ಯಾಂಕ್ ಭದ್ರತೆಗಳನ್ನು ಗುತ್ತಿಗದಾರರಿಂದ ಸರ್ಕಾರಕ್ಕೆ ಬರಬೇಕಾದ ಬಾಕಿಗೆ ಹೊಂದಾಣಿಕೆ ಮಾಡಿಕೊಳ್ಳಲಾಗುತ್ತಿದೆ

ಔರಾದ್ ತಾಲ್ಲೂಕಿನಲ್ಲಿ ಅಕ್ರಮ ಸಾರಾಯಿ ದಂಧೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 138(466)

ಸದಸ್ಯರ ಹೆಸರು ಶ್ರೀ ಗುಂಡಪ್ಪ ವಕೀಲ್ (ಔರಾದ್)

ಉತ್ತರಿಸುವ ಸಚಿವರು ಮಾನ್ಯ ಶ್ರೀ ಎಂ ಎಂ ನಾಣಯ್ಯ(ಅಬಕಾರಿ ರಾಜ್ಯ ಸಚಿವರು)

ಪ್ರಶ್ನೆ

ಅ) ಬೀದರ್ ಜಿಲ್ಲೆ ಔರಾದ್ ತಾಲ್ಲೂಕನಲ್ಲಿ ಅಕ್ರಮವಾಗಿ ಸಾರಾಯಿ ಮಾರಾಟವಾಗುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಅಕ್ರಮ ವ್ಯವಹಾರಕ್ಕೆ ಕಾರಣವೇನು ಗುತ್ತಿಗೆದಾರರುಗಳು ವರವಾನಗಿ ಇಲ್ಲದೆ ಇಂತಹ ಅಕ್ರಮ ಸಾರಾಯಿ ಅಂಗಡಿ ನಡೆಸುತ್ತಿರಲು ಕಾರಣಗಳೇನು?

ಇ) ಅಧಿಕೃತವಾಗಿ ಇಲಾಖೆಯಿಂದ ವರವಾನಗಿ ಪಡದಂತಹ ಅಬಕಾರಿ ಗುತ್ತಿಗೆದಾರರ ಹೆಸರು, ವಿವರ ಪಟ್ಟಿ ಒದಗಿಸುವುದು?

ಈ) ಸರ್ಕಾರದ ಗಮನಕ್ಕೆ ಬಂದಂತೆ ಅಕ್ರಮವಾಗಿ ವರವಾನಗಿ ಇಲ್ಲದೆ